

# ಬೆಳಕಿನ ನೆರಳು

**ಮಹಾತ್ಮ ಮತ್ತು ಹರಿಲಾಲ್**


■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ


## ಸ್ವದೇಶಕ್ಕೆ ಮರಳಿದ ಬಾಪೂ

ಬಾಪೂ ಅವರ ಪತ್ರವನ್ನು ನೋಡಿ ಹರಿಲಾಲ ಒಮ್ಮೆಲೆ ರೇಗಿದ್ದ. ಮಣಿಲಾಲನ ಘಟನೆಯನ್ನುತಿಳಿದ ನಂತರ ಅವನ ಮನಸ್ಸು ರೋಷದಿಂದ ಕುದಿಯುತ್ತಿತ್ತು. ಅಲ್ಲದೆ ಬಾಪೂ ಅವರು ಬರೆದ ಪತ್ರದಿಂದ ಹರಿಲಾಲನ ಮನಸ್ಸಿನಲ್ಲಿ ಬಾಪೂ ಅವರ ಬಗ್ಗೆ ಬೇರೆ ತೆರನಾದ ಭಾವನೆ ಮೂಡಿತು. ಹರಿಲಾಲನ ಮನಸ್ಸಿನಲ್ಲಿ ಬಾಪೂ ಅವರ ಜೀವನಶೈಲಿ ಅಸಾಮಾನ್ಯ, ಒಂದು ವೇಳೆ ಯಾರಾದರು ಅವರ ಮಾರ್ಗವನ್ನು ಬಿಟ್ಟು ಪ್ರತ್ಯೇಕ ಮಾರ್ಗದಲ್ಲಿ ಮುಂದುವರೆಯಲು ಬಯಸಿದರೆ ಅಥವಾ ಆ ಬಗ್ಗೆ ಯೋಚಿಸಿದರೆ, ಅಂಥವರ ಬಗ್ಗೆ ಬಾಪೂ ಅಸಹಿಷ್ಣುತೆಯನ್ನು ಮನಗಾಣುತ್ತಾರೆ ಎಂಬ ಸಂಗತಿ ಮನೆಮಾಡಿತು.

ಬಾಪೂ ತಮ್ಮ ವಿಚಾರಗಳಿಗೆ ಪ್ರತಿಯಾಗಿ ಬೇರೆ ವಿಚಾರಧಾರೆಯನ್ನು ಹೊಂದಿದ್ದರೆ, ಅಂಥವರ ಮಾತುಗಳನ್ನು ಆತ್ಮೀಯವಾಗಿ ಕೇಳುವುದಿಲ್ಲ ಎಂಬುದನ್ನು ಹರಿಲಾಲ ನಂಬುತ್ತಾ ಬಂದಿದ್ದ. ಈಗ ಈ ಅಭಿಪ್ರಾಯ ದೃಢವಾಗಿತ್ತು. ತಾವು ಯಾವ ಮಾರ್ಗವನ್ನು ಒಪ್ಪಿಕೊಂಡಿದ್ದಾರೋ, ಅದೇ ಮಾರ್ಗ ನಿಜವಾದದ್ದು ಮತ್ತು ಉತ್ತಮವಾದದ್ದು ಎಂದು ಬಾಪೂ ತಿಳಿಯಬಹುದು. ಆದರೆ ಅವರ ಸುತ್ತಮುತ್ತ ಇರುವವರು, ವಿಶೇಷವಾಗಿ ಅವರ ಪರಿವಾರದ ಸದಸ್ಯರು ಮತ್ತು ಮಕ್ಕಳು ಸಹ ಇಂಥ ಜೀವನವನ್ನು ಸಾಗಿಸಬೇಕು ಎಂಬ ಬಾಪೂ ಅವರ ಆಗ್ರಹ ಹರಿಲಾಲನಿಗೆ ದುರಾಗ್ರಹವೆಂದು ಕಂಡಿತು. ಆಶ್ರಮದಲ್ಲಿ ಯಾರು ಉಪವಾಸವನ್ನು ಮಾಡುತ್ತಾರೋ ಅಥವಾ ಸ್ವಪೀಡನೆಯ ಮಿತಿಯವರೆಗೆ ತಮ್ಮ ಶರೀರಕ್ಕೆ ಕಷ್ಟವನ್ನು ಕೊಟ್ಟುಕೊಳ್ಳುವರೋ, ಅಂಥವರಿಗೆ ಬಾಪೂ ಅದೆಷ್ಟು ಸಂತಸದಿಂದ ತಪಸ್ವಿಯ ಬಿರುದನ್ನು ಕೊಡುತ್ತಿದ್ದರು ಎಂಬುದು ಈಗ ಹರಿಲಾಲನಿಗೆ ನೆನಪಾಯಿತು. ಆದರೆ ಈ ತಪಸ್ವಿಗಳು ಸಮಯ ಬಂದಾಗ ತಪಸ್ಸನ್ನು ತ್ಯಜಿಸಿ ಸಾಮಾನ್ಯ ಬದುಕಿಗೆ ನುಸುಳಿ ಹೋಗಿದ್ದರು ಎಂಬ ಅನೇಕ ಸಂಗತಿಗಳು ಹರಿಲಾಲನಿಗೆ ತಿಳಿದಿತ್ತು.

ಹರಿಲಾಲ ಬಾಪೂ ಅವರ ಪತ್ರಕ್ಕೆ ಉತ್ತರಿಸಲಿಲ್ಲ. ಅಲ್ಲದೆ ಇನ್ನು ಮುಂದೆ ತಾನು ತನ್ನ ಜೀವನದ ಮಾರ್ಗವನ್ನು ತಾನೇ ಆಯ್ಕೆ ಮಾಡಿಕೊಂಡು ಆ ಮಾರ್ಗದಲ್ಲಿಯೇ ಮುಂದುವರೆಯುತ್ತೇನೆ, ಮತ್ತೆಂದೂ ಬಾಪೂ ಅವರ ಮಾರ್ಗಕ್ಕೆ ತಾನು ಮರಳಿ ಹೋಗುವುದಿಲ್ಲ ಎಂದು ಮನಸ್ಸಿನಲ್ಲಿಯೇ ತೀರ್ಮಾನಿಸಿದ.

ಆದರೆ ಹರಿಲಾಲನಿಗೆ, ತೀರ್ಮಾನ ಮಾಡುವುದು ಬೇರೆ, ಅದರಂತೆ ಯಶಸ್ವಿಯಾಗಿ ಪಾಲಿಸುವುದು ಬೇರೆ ಎಂಬುದು ತಿಳಿದಿರಲಿಲ್ಲ. ಅತ್ತ ಕಡೆ, ಹರಿಲಾಲ ತಮ್ಮ ಪತ್ರಕ್ಕೆ ಉತ್ತರಿಸಲಿಲ್ಲ, ಆಫ್ರಿಕಾಕ್ಕೆ ಮರಳಿ ಬರುವ ಬಗ್ಗೆ ಏನೂ ತಿಳಿಸಲಿಲ್ಲ ಎಂದು ಬಾಪೂ ತುಂಬಾ ರೇಗಿದ್ದರು. ಈಗ ಅವರಿಗೆ ಹರಿಲಾಲನ ಮಾತುಗಳು ನಿಜವಾಗಿಲ್ಲ, ಅದು ಬೆದರಿಕೆ ಮಾತ್ರವಾಗಿತ್ತು ಎಂಬ ವಿಶ್ವಾಸ ಮೂಡಿತು. ಹರಿಲಾಲ ಯಶಸ್ಸನ್ನು ಪಡೆಯಲಿಲ್ಲ, ಆದಾಗ್ಯೂ ಅವನಿಂದ ವಿದ್ಯಾಭ್ಯಾಸವನ್ನು ಮಾಡುವ ವ್ಯಾಮೋಹವನ್ನು ಬಿಡಲು ಸಾಧ್ಯವಾಗಲಿಲ್ಲ. ಈಗ ಅವನು ಜೀವನದ ಉನ್ನತ ಮೌಲ್ಯಗಳಿಗೆ ವಿರುದ್ಧವಾದ ದಿಕ್ಕಿನಲ್ಲಿ ಹೋಗುತ್ತಿದ್ದ, ಇದರ ಸುಳಿವು ಸಹ ಬಾಪೂ ಅವರಿಗೆ ಲಭಿಸಿತ್ತು. ಇಂಥ ಪರಿಸ್ಥಿತಿಗಳಲ್ಲಿ, ಎಲ್ಲರೂ ಬಯಸಿದಂತೆ ದಕ್ಷಿಣ ಆಫ್ರಿಕಾದ ಹೋರಾಟಕ್ಕೆ ತೀರ್ಪು ಲಭಿಸಿತು.

ಬ್ರಿಟಿಷ್ ಸರ್ಕಾರ ಬಾಪೂ ಅವರೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತು. ವಿದೇಶದಲ್ಲಿ ಈ ಒಪ್ಪಂದವನ್ನು ಸ್ವಾಗತಿಸಲಾಯಿತು. ಎಲ್ಲಾ ಸತ್ಯಾಗ್ರಹಿಗಳನ್ನು ಜೈಲಿನಿಂದ ಮುಕ್ತಗೊಳಿಸಲಾಯಿತು. ಟಾಲ್‌ಸ್ಟಾಯ್ ಆಶ್ರಮವನ್ನು ಸಹ ವಶಪಡಿಸಿಕೊಳ್ಳಲಾಯಿತು. ಹೋರಾಟ ಕೊನೆಗೊಂಡ ನಂತರ ತಾವು ಆಫ್ರಿಕಾವನ್ನು ಸದಾಕಾಲಕ್ಕೂ ತ್ಯಜಿಸಿ ಹಿಂದೂಸ್ತಾನದ ಸ್ವಾತಂತ್ರ್ಯದ ಚಳವಳಿಯಲ್ಲಿ ಭಾಗವಹಿಸಲು ಹಿಂದೂಸ್ತಾನದಲ್ಲಿ ವಾಸಿಸುತ್ತೇನೆ ಎಂದು ಬಾಪೂ ಅವರು ಈ ಮೊದಲೇ ತಮ್ಮ ತೀರ್ಮಾನವನ್ನು ಘೋಷಿಸಿದ್ದರು. ಈ ತೀರ್ಮಾನದಂತೆ ಬಾ ಮತ್ತು ಬಾಪೂ ಆಫ್ರಿಕಾದಿಂದ ಹಿಂದೂಸ್ತಾನಕ್ಕೆ ಗೃಹಸ್ಥ ಜೀವನಕ್ಕೆ ವರ್ಗಾಯಿಸಿದರು.

ಇನ್ನು ಬಾಪೂ ಅವರು ಸದಾಕಾಲಕ್ಕೆ ಹಿಂದೂಸ್ತಾನಕ್ಕೆ ಮರಳಿ ಬರುತ್ತಿರುವ ವಿಷಯ ಹರಿಲಾಲನಿಗೆ ಈ ಮೊದಲೇ ತಿಳಿದಿತ್ತು. ಇದುವರೆಗೆ ಅವನ ಸಿಟ್ಟಿನ ಆವೇಶ ಶಮನಗೊಂಡಿತ್ತು. ಉದ್ವೇಗ ಕಡಿಮಾಗದಿದ್ದಾಗ್ಯೂ, ಇಷ್ಟೆಲ್ಲಾ ಘಟಿಸಿದರೂ ಬಾಪೂ ತನ್ನನ್ನು ಇಷ್ಟಪಡುತ್ತಾರೆ ಎಂಬ ವಿಷಯ ಹರಿಲಾಲನ ಮನಸ್ಸಿನಲ್ಲಿ ಮನೆ ಮಾಡಿತ್ತು. ಬಾ ಮತ್ತು ಬಾಪೂ ಅವರನ್ನು ಭೇಟಿಯಾಗಲು ಅವನ ಮನಸ್ಸು ಕಾತರಿಸಿತು. ಬಾಪೂ ಅವರಿಗೆ ಹೋಲಿಸಿದಾಗ ಬಾ ಅವರ ಬಗ್ಗೆ ಅವನ ಮನಸ್ಸು ವಿಶೇಷವಾಗಿ ವ್ಯಗ್ರಗೊಳ್ಳುತ್ತಿತ್ತು. ಬಾ ಅವರು ತಮ್ಮ ದುಃಖವನ್ನು ಯಾರೊಂದಿಗೂ ಹೇಳಿಕೊಳ್ಳುವುದಿಲ್ಲ, ಅದನ್ನು ಒಳಗೊಳಗೇ ಸಹಿಸಿಕೊಳ್ಳುತ್ತಾರೆ ಎಂಬ ಸಂಗತಿ ಹರಿಲಾಲನನ್ನು ಸದಾ ಚಿಂತೆಗೀಡುಮಾಡುತ್ತಿತ್ತು.

ಬಾಪೂ ಆಫ್ರಿಕಾದಿಂದ ಹಡಗಿನಲ್ಲಿ ಮರಳಿ ಬರುವುದಕ್ಕೆ ಕೆಲವು ದಿನಗಳ ಮೊದಲೇ ಮಣಿಲಾಲ, ರಾಮದಾಸ ಮತ್ತು ದೇವದಾಸ ಮೂವರು ಸಹೋದರರು ಹಿಂದೂಸ್ತಾನಕ್ಕೆ ಬಂದರು. ಮೂವರು ಸಹೋದರರೂ ಹರಿಲಾಲನನ್ನು ಭೇಟಿಯಾದರು. ಹರಿಲಾಲ ಮೂವರನ್ನು ಸಂಧಿಸಿ ಸಂತಸಪಟ್ಟ.

ದೇವದಾಸ ಈಗ ಏನೂ ಅರಿಯದ ಕಿಶೋರನಾಗಿದ್ದ. ಮಣಿಲಾಲ ತುಂಬಾ ಗಂಭೀರ ಸ್ವಭಾವದ, ದೃಢಚಿತ್ತದ